ಪ್ರೊ: ಎಂ.ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಭಾರತೀಯ ದಂಡಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಯಿತು*

೨, ೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ (ಪ್ರಾಧಿಕಾರ ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಟಿ. ಎಂ. ಮಂಜುನಾಥ್.— ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ,

೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು

(ಪ್ರಸ್ತಾಪ ಅಂಗೀಕಾರವಾಯಿತು, ವಿಧೇಯಕವನ್ನು ಮಂಡಿಸಲು ಅನುಮತಿ ನೀಡಲಾಯಿತು)

ಶ್ರೀ ಟಿ.ಎಂ. ಮಂಜುನಾಥ್.— ೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— * ವಿಧೇಯಕವನ್ನು ಮಂಡಿಸಲಾಯಿತು. *

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಟಿ.ಎಂ. ಮಂಜುನಾಥ್.— ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಹಾಗೂ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ

೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸುವುದು.

ಪ್ರಸ್ತಾವವನ್ನು ಮಂಡಿಸಲಾಯಿತು

† ಶ್ರೀ ಟಿ.ಎಂ. ಮಂಜುನಾಥ್ (ಶಿಪಟೂರು).— ಮಾನ್ಯ ಅಧ್ಯಕ್ಷರೇ, ಪರ್ಯಾಲೋಚನಾ ಪ್ರಸ್ತಾವವನ್ನು ಮಂಡಿಸುತ್ತಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಏನಿದೆ ಇದು ೧೯೭೬ನೇ ಇಸವಿಯಿಂದ ಬೆಂಗಳೂರು ನಗರದಲ್ಲಿರತಕ್ಕಂಥ ಸೈಟ್‌ಗಳನ್ನು ವಿಲೇವಾರಿ ಮಾಡತಕ್ಕ ಬಗ್ಗೆ ಕೆಲವಾರು ಕಾನೂನುಗಳನ್ನು ಆಕ್ಟ್‌ಗಳನ್ನು ಮಾಡಿದ್ದಾರೆ. ಆದರೆ ಇದರಲ್ಲಿ ಸಿ.ಎ. ಸೈಟ್‌ಗಳು ಏನಿವೆ ಇದರ ಬಗ್ಗೆ ೧೯೮೨ನೇ ಇಸವಿಯಲ್ಲಿ ಒಂದು ತಿದ್ದುಪಡಿ ತರಲಾಯಿತು. ಇದು ಸಾರ್ವಜನಿಕ ಹಿತದೃಷ್ಟಿಯಿಂದ ಆಸ್ಪತ್ರೆಗಳು, ಪೋಲೀಸ್ ಸ್ಟೇಷನ್‌ಗಳು ಮತ್ತು ಪಾಠಶಾಲೆಗಳು ಹಾಗೂ ಆಧ್ಯಾತ್ಮಿಕ ಕೇಂದ್ರಗಳಿಗೆ ಈ ಸಿ.ಎ. ಸೈಟ್‌ಗಳನ್ನು ಕೊಡಬೇಕೆಂಬ ಒಂದು ತಿದ್ದುಪಡಿ ಆಗ ತಂದಿದ್ದರು. ಆದರೆ ೧೯೮೪ನೇ ಇಸವಿಯಲ್ಲಿ ಹೀಗೆ ಮಾಡಬಾರದೆಂದು ಒಂದು ವಿಧೇಯಕವನ್ನು ತಂದಂ ಆಗಿನ ಸರಕಾರ ಅದನ್ನು ನಿಲ್ಲಿಸಿತು. ಹಾಗೆ ನಿಲ್ಲಿಸಿದರೂ ಸಹ ೧೯೮೪ನೇ ಇಸವಿಯಿಂದೀಚೆಗೆ ಸಾರ್ವಜನಿಕರ ಶ್ರೇಯಸ್ಸಿಗಾಗೋಸ್ಕರ ಅಂದರೆ ಆಸ್ಪತ್ರೆ ಕಟ್ಟುವುದಕ್ಕೆ ಉಳಿದಂತೆ ದೇವಸ್ಥಾನಗಳನ್ನು ಕಟ್ಟುವುದಕ್ಕೆ ಸಾಂಸ್ಕೃತಿಕ ಕಟ್ಟಡಗಳನ್ನು ಕಟ್ಟುವುದಕ್ಕೆ ಆಧ್ಯಾತ್ಮಿಕ ಕಟ್ಟಡಗಳನ್ನು ಕಟ್ಟುವುದಕ್ಕೆ ಈ ರೀತಿ ಸುಮಾರು ೪೮ ಸಂಸ್ಥೆಗಳಿಗೆ ಈಗಾಗಲೇ ಕೊಟ್ಟು ಬಿಟ್ಟಿದ್ದಾರೆ. ಹೀಗೆ ಪಡೆದಿರತಕ್ಕಂಥವರು ಏನು ಮಾಡಿದ್ದಾರೆಂದರೆ ಈಗಾಗಲೇ ಲೈಸೆನ್ಸ್ ಪಡೆದು ಕಟ್ಟಡಗಳನ್ನು ಕಟ್ಟಿದ್ದಾರೆ ದೇವಸ್ಥಾನಗಳನ್ನು ಕಟ್ಟಿದ್ದಾರೆ. ಪಾಠಶಾಲೆಗಳನ್ನು ಕಟ್ಟಿದ್ದಾರೆ. ಆಮೇಲೆ ೧೯೮೬ನೇ ಇಸವಿಯಲ್ಲಿ ಅವರು ಒಂದು ತಿದ್ದುಪಡಿಯನ್ನು ತಂದರು. ಇದನ್ನೆಲ್ಲಾ

* ಅನುಬಂಧ *